ಕರ್ನಾಟಕ ಸರ್ಕಾರ

# ಕರ್ನಾಟಕ ಪರೀಕ್ಷಾ ಪ್ರಾಧಿಕಾರ

ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 012. ದೂರವಾಣಿ: 080-23 460 460 (5 ಲೈನ್‌ಗಳು)
ಫ್ಯಾಕ್ಸ್: 080-23461576 ಇಮೇಲ್: keaauthority-kar@nic.in ವೆಬ್‌ಸೈಟ್: http://kea.kar.nic.in

ಸಂಖ್ಯೆ : ಇಡಿ/ಕೆಇಎ/ಆಡಳಿತ/45/2014-15 ದಿನಾಂಕ: 26-11-2015

# ಅಧಿಸೂಚನೆ

## ಕರ್ನಾಟಕದ ಸರ್ಕಾರಿ ಹಾಗು ಸ್ವಾಯತ್ತ ಸಂಸ್ಥೆಗಳಲ್ಲಿ ಖಾಲಿ ಇರುವ ಶುಶ್ರೂಷಕರ ಹುದ್ದೆಗಳ ನೇಮಕಾತಿ

**ಅ) ಶುಶ್ರೂಷಕರ ನೇಮಕಾತಿ – ಹೆಚ್ಚುವರಿ ಸಂಸ್ಥೆಗಳ ಸೇರ್ಪಡೆ**

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಸರ್ಕಾರದ ಆದೇಶದ ಅನ್ವಯ ಕರ್ನಾಟಕ ರಾಜ್ಯದಲ್ಲಿನ ವಿವಿಧ ಸರ್ಕಾರಿ ಹಾಗು ಸ್ವಾಯತ್ತ ಸಂಸ್ಥೆಗಳಲ್ಲಿನ ಶುಶ್ರೂಷಕರ ನೇಮಕಾತಿ ಸಂಬಂಧ ದಿನಾಂಕ 30-10-2015 ರಂದು ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಬೆಂಗಳೂರು ಇವರು ತಮ್ಮ ಪತ್ರ ಸಂಖ್ಯೆ: ವೈಶಿ/ಸಿಬ್ಬಂದಿ/66/2015-16 ದಿನಾಂಕ 25-11-2015 ರಲ್ಲಿ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು ಮತ್ತು ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ ಈ ಎರಡು ಸಂಸ್ಥೆಗಳನ್ನು ಈ ಮೊದಲು ದಿನಾಂಕ 30-10-2015 ರಂದು ಪ್ರಕಟಿಸಿದ್ದ ಅಧಿಸೂಚನೆಯಲ್ಲಿ ನೀಡಿರುವ ಸಂಸ್ಥೆಗಳ ಜೊತೆಯಲ್ಲಿ ಹೊಸದಾಗಿ ಸೇರ್ಪಡೆ ಮಾಡಲು ಕೋರಿರುತ್ತಾರೆ.

**ಹೊಸದಾಗಿ ಸೇರ್ಪಡೆಯಾದ ಸಂಸ್ಥೆಗಳು ಹಾಗು ಖಾಲಿ ಇರುವ ಹುದ್ದೆಗಳು**

| ಕ್ರ. ಸಂ. | ಸಂಸ್ಥೆಗಳ ವಿವರ | ಒಟ್ಟು ಹುದ್ದೆಗಳು | ಬಿ.ಎಸ್.ಸಿ. ಶುಶ್ರೂಷಕರಿಗೆ ಶೇ.25% | ಸಾಮಾನ್ಯ ಶುಶ್ರೂಷಕರಿಗೆ (ಜಿ.ಎನ್.ಎಮ್.) ಶೇ.75% | ನೇಮಕಾತಿಯನ್ನು ಸಂಪೂರ್ಣವಾಗಿ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೂಲಕ ಕೈಗೊಳ್ಳಲಾಗುವುದು (ಸಂದರ್ಶನ ಇರುವುದಿಲ್ಲ) |
|---|---|---|---|---|---|
| 1 | ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು | 201 | 52 | 149 | |
| 2 | ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ | 166 | 38 | 128 | |
| | ಒಟ್ಟು | 367 | 90 | 277 | |

ಎರಡೂ ಅಧಿಸೂಚನೆಗಳಲ್ಲಿ ನೀಡಿರುವ ಸಂಸ್ಥೆಗಳಿಗೆ, ಆಸಕ್ತಿಯುಳ್ಳ ಅರ್ಹ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ದಿನಾಂಕ 26-12-2015 ರೊಳಗಾಗಿ ಅರ್ಜಿಯನ್ನು ಸಲ್ಲಿಸಬಹುದು ಹಾಗು ನಿಗದಿತ ಶುಲ್ಕವನ್ನು ಪಾವತಿಸಲು ಅಂತಿಮ ದಿನಾಂಕ 29-12-2015. ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ದಿನಾಂಕ 30-10-2015ರ ಅಧಿಸೂಚನೆಯ ಅನ್ವಯ ಶುಶ್ರೂಷಕರ ಹುದ್ದೆಗೆ ಈಗಾಗಲೇ ಅರ್ಜಿಯನ್ನು ಸಲ್ಲಿಸಿರುವ ಅಭ್ಯರ್ಥಿಗಳು ಈ ಸಂಸ್ಥೆಗಳಲ್ಲಿ ಖಾಲಿ ಇರುವ ಶುಶ್ರೂಷಕರ ಹುದ್ದೆಗಳಿಗೂ ಸಹ ಅರ್ಜಿ ಸಲ್ಲಿಸಬಹುದಾಗಿದೆ ಅಂತಹ ಅಭ್ಯರ್ಥಿಗಳು ಈ ಸಂಸ್ಥೆಗಳಿಗೆ ನೇಮಕಾತಿ ಇಚ್ಛಿಸಿದಲ್ಲಿ ಆನ್‌ಲೈನ್ ಮೂಲಕ ಈಗಾಗಲೇ ಸಲ್ಲಿಸಿರುವ ಅರ್ಜಿಯಲ್ಲಿ ಮಾರ್ಪಡಿಸಬಹುದಾಗಿದೆ.

ಅಭ್ಯರ್ಥಿಗಳು ಹೆಚ್ಚಿನ ವಿವರಗಳಿಗಾಗಿ ಅಂದರೆ, ಪ್ರವರ್ಗವಾರು ಮತ್ತು ವಿಷಯವಾರು ಹುದ್ದೆಗಳ ವಿವರಗಳು, ಸದರಿ ನೇಮಕಾತಿ ಪ್ರಕ್ರಿಯೆಗೆ ನಿಗದಿ ಪಡಿಸಿರುವ ವಯೋಮಿತಿ, ಶೈಕ್ಷಣಿಕ ಅರ್ಹತೆ, ಅರ್ಜಿ ಸಲ್ಲಿಸುವ ವಿಧಾನ, ಪರೀಕ್ಷೆ ಶುಲ್ಕ, ಆಯಾ ವಿಷಯಗಳಿಗೆ ಅಗತ್ಯ ಅರ್ಹತೆ ವಿವರ, ಸ್ಪರ್ಧಾತ್ಮಕ ಪರೀಕ್ಷೆಯ ಪತ್ರಿಕೆಗಳು ಹಾಗೂ ಇತರೆ ಎಲ್ಲ ನೇಮಕಾತಿಯ ವಿವರಗಳನ್ನು ಕೆಇಎ ವೆಬ್‌ಸೈಟ್ http://kea.kar.nic.in ನಿಂದ ಪಡೆಯಬಹುದಾಗಿದೆ. ಈ ಹಿಂದೆ ಪ್ರಕಟಿಸಿದ್ದ ಅಧಿಸೂಚನೆಯನ್ನೂ ಸಹ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ನೋಡಬಹುದಾಗಿದೆ.

**ಆ) ಶುಶ್ರೂಷಕರ ನೇಮಕಾತಿ – ದಿನಾಂಕ 30-10-2015 ರಂದು ಪ್ರಾಧಿಕಾರದಿಂದ ಪ್ರಕಟಿಸಿದ ಅಧಿಸೂಚನೆಗೆ ತಿದ್ದುಪಡಿ.**

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಸರ್ಕಾರದ ಆದೇಶದ ಅನ್ವಯ ಕರ್ನಾಟಕ ರಾಜ್ಯದಲ್ಲಿನ ವಿವಿಧ ಸರ್ಕಾರಿ ಹಾಗು ಸ್ವಾಯತ್ತ ಸಂಸ್ಥೆಗಳಲ್ಲಿನ ಶುಶ್ರೂಷಕರ ನೇಮಕಾತಿ ಸಂಬಂಧ ದಿನಾಂಕ 30-10-2015 ರಂದು ಪ್ರಕಟಿಸಿದ ಅಧಿಸೂಚನೆಯಲ್ಲಿ ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹುಬ್ಬಳ್ಳಿ, ನೆಫ್ರೋಯುರಾಲಜಿ ಸಂಸ್ಥೆ, ಬೆಂಗಳೂರು ಮತ್ತು ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ, ಬೆಂಗಳೂರು ಈ ಮೂರು ಸಂಸ್ಥೆಗಳನ್ನು ಹೊರತುಪಡಿಸಿ ಪ್ರಕಟಿಸಿದ ಉಳಿದ ಸಂಸ್ಥೆಗಳವರು 85% ಸ್ಪರ್ಧಾತ್ಮಕ ಪರೀಕ್ಷೆ ಅಂಕಗಳ ಮೂಲಕ ಹಾಗು 15% ಸಂದರ್ಶನದ ಅಂಕಗಳ ಮೂಲಕ ನೇಮಕಾತಿಯನ್ನು ಮಾಡಲಾಗುವುದು ಎಂದು ಸೂಚಿಸಲಾಗಿತ್ತು.

ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಬೆಂಗಳೂರು ಇವರು ತಮ್ಮ ಪತ್ರ ಸಂಖ್ಯೆ: ವೈಶಿ/ಸಿಬ್ಬಂದಿ/66/2015-16 ದಿನಾಂಕ 25-11-2015 ರಲ್ಲಿ ಶುಶ್ರೂಷಕರನ್ನು 100% ಸ್ಪರ್ಧಾತ್ಮಕ ಪರೀಕ್ಷೆಯ ಅಂಕಗಳ ಆಧಾರದ ಮೂಲಕವೇ ಆಯ್ಕೆಮಾಡಲು ಸರ್ಕಾರವು ತನ್ನ ಅನುಮೋದನೆಯನ್ನು ನೀಡಿರುತ್ತದೆ ಎಂದು ತಿಳಿಸಿರುತ್ತಾರೆ. ಈ ಹಿನ್ನಲೆಯಲ್ಲಿ ದಿನಾಂಕ 30-10-2015ರಂದು ಪ್ರಕಟಿಸಿದ ಅಧಿಸೂಚನೆಗೆ ತಿದ್ದುಪಡಿಯನ್ನು ತರಲಾಗಿದೆ ಹಾಗು ಪ್ರಕಟಿಸಿದ ಎಲ್ಲಾ ಸಂಸ್ಥೆಗಳಲ್ಲಿ ಶುಶ್ರೂಷಕರ ನೇಮಕಾತಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸುವ ಅಂಕಗಳ ಆಧಾರದ ಮೂಲಕವೇ ಸಂಪೂರ್ಣವಾಗಿ 100% ಸ್ಪರ್ಧಾತ್ಮಕ ಪರೀಕ್ಷೆಯ ಅಂಕಗಳ ಆಯಾ ಸಂಸ್ಥೆಗಳಿಂದ ಆಯ್ಕೆ ಪ್ರಕ್ರಿಯೆಯನ್ನು ಕೈಗೊಳ್ಳಲಾಗುವುದು (ಸಂದರ್ಶನ ಇರುವುದಿಲ್ಲ). ಮೊದಲ ಅಧಿಸೂಚನೆಯಲ್ಲಿ ನೀಡಿರುವ ಇತರೆ ಸೂಚನೆ ಮತ್ತು ಮಾರ್ಗದರ್ಶನಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

ಸಹಿ/- ಕಾರ್ಯನಿರ್ವಾಹಕ ನಿರ್ದೇಶಕರು

12x20